ಓ ಎಸ್ ನಂಃ 325-14
ಡಿ ಡಬ್ಲ್ಯೂ ಃ 2

ದಿಃ 05.03.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಸಿ ಕೆ ವಕೀಲರಿಂದ

17. ನನ್ನ ತಾತ ನರಸಿಂಹೇಗೌಡರ ತಂದೆ ಹೆಸರು ಗೊತ್ತಿಲ್ಲ. ನಾನು 1959 ರಲ್ಲಿ ಹುಟ್ಟಿರುತ್ತೇನೆ. ನಾನು ಹುಟ್ಟಿದ ಸಂದರ್ಭದಲ್ಲಿ ನನ್ನ ತಾತ ನರಸಿಂಹೇಗೌಡರು ಜೀವಂತ ಇರಲಿಲ್ಲ. ನರಸಿಂಹೇಗೌಡರಿಗೆ 5 ಜನ ಮಕ್ಕಳು. ಅವರಿಗೆ ಇಬ್ಬರು ಹೆಂಡತಿಯರು. ಅವರ ಮೊದಲನೆ ಹೆಂಡತಿ ಹೆಸರು ಗೊತ್ತಿಲ್ಲ. ಅವರ ಎರಡನೇ ಹೆಂಡತಿ ಹೆಸರು ಲಕ್ಷ್ಮಿನರಸಮ್ಮ. 1 ನೇ ಹೆಂಡತಿಗೆ ನರಸಪ್ಪ ಮತ್ತು ಸಂಜೀವಯ್ಯ ಎಂಬ ಇಬ್ಬರು ಜನ ಮಕ್ಕಳು. 2 ನೇ ಹೆಂಡತಿಗೆ ಚಿಕ್ಕನರಸೇಗೌಡ, ರಾಮೇಗೌಡ ಹಾಗೂ ಲಕ್ಷ್ಮಣಗೌಡ ಎಂಬ ಮಕ್ಕಳು. ಸದರಿ ನರಸಪ್ಪರವರಿಗೆ ಇಬ್ಬರು ಹೆಂಡತಿಯರು ಅಂದರೆ ಸರಿಯಲ್ಲ. ಸಾಕ್ಷಿ ಪುನಃ ಎಷ್ಟು ಜನ ಹೆಂಡತಿಯರು ಹಾಗೂ ಅವರವಾರಸುದಾರರು ಗೊತ್ತಿಲ್ಲ. ಸಂಜೀವಯ್ಯರ ಹೆಂಡತಿ ಹೆಸರು ಈರಮ್ಮ. ಈರಮ್ಮನ ತಂದೆ ಹೆಸರು ಗೊತ್ತಿಲ್ಲ. ಅವರ ಹೆಸರು ನಾಗಣ್ಣ ಅಂದರೆ ನನಗೆ ಗೊತ್ತಿಲ್ಲ. ಆದರೆ ಕೊರಟಗೆರೆ ತಾಲೂಕಿನ ಊರ್ಡಿಗೆರೆ ಗ್ರಾಮದವರು. ನರಸಿಂಹಯ್ಯ, ಉಗ್ರಪ್ಪ, ಭಾಗ್ಯಮ್ಮ ಹಾಗೂ ನಾಗಮ್ಮ ಎಂಬ ನಾಲ್ಕು ಜನ ಸಂಜೀವಯ್ಯನಿಗೆ ಮಕ್ಕಳುಗಳು. ಅವರೆಲ್ಲಾ ನರಸಿಂಹೇಗೌಡರ ಮೊದಲನೇ ಹೆಂಡತಿಯ ವಾರಸುದಾರರು ಅಂದರೆ ಸರಿ.

18. ಚಿಕ್ಕನರಸೇಗೌಡರಿಗೆ ಇಬ್ಬರು ಹೆಂಡತಿಯರು. 1 ನೇ ಹೆಂಡತಿ ಹೆಸರು ಗೊತ್ತಿಲ್ಲ. 2 ನೇ ಹೆಡತಿ ಹೆಸರು ಲಕ್ಷ್ಮಮ್ಮ. 1 ನೇ ಹೆಂಡತಿ ಮಗನ ಹೆಸರು ಲಕ್ಷ್ಮೀಪತಯ್ಯ ಅಂದರೆ ಸರಿ. 2 ನೇ ಹೆಂಡತಿ ಮಕ್ಕಳು ನಾಗರಾಜು, ನರಸಿಂಹೇಗೌಡ ಅಂದರೆ ಸರಿ. ರಾಮೇಗೌಡರ ಹೆಂಡತಿ ಹನುಮಕ್ಕ ಅಂದರೆ ಸರಿ. ಅವರಿಗೆ ಪುಟ್ಟೇಗೌಡ, ನರಸಿಂಹೇಗೌಡ, ನರಸಿಂಹಯ್ಯ ಮತ್ತು ನರಸಪ್ಪ ಎಂಬ 4 ಜನ ಮಕ್ಕಳು ಎಂದರೆ ಸರಿ. ಪುಟ್ಟೇಗೌಡರವರಿಗೆ ಎಷಟು ಜನ ಮಕ್ಕಳು ಎಂದು ಗೊತ್ತಿಲ್ಲ. ನರಸಿಂಹೇಗೌಡರಿಗೆ ಸಂತಾನ ಇಲ್ಲ ಅಂದರೆ ಸರಿ. ನರಸಿಂಹಯ್ಯರವರು ಕಳೆದ ವರ್ಷ ಮೃತಪಟ್ಟಿರುತ್ತಾರೆ. ದಿನಾಂಕ ಗೊತ್ತಿಲ್ಲ. ನರಸಪ್ಪ ಇದ್ದಾರೆ.

19. ನನ್ನ ತಂದೆಗೆ ಒಟ್ಟು 5 ಜನ ಗಂಡು ಮಕ್ಕಳು ಹಾಗೂ ಮೂರು ಜನ ಹೆಣ್ಣು ಮಕ್ಕಳು. ಅವರುಗಳೆಂದರೆ, ಕೃಷ್ಣಮೂರ್ತಿ, ನಾನು, ಸಿದ್ದರಾಜು, ನಾಗರಾಜು ಮತ್ತು ನರಸಪ್ಪ ಹಾಗೂ ಲಲಿತಮ್ಮ, ಪ್ರಮೀಳಾ ಹಾಗೂ ಅನುಸೂಯ. ನನಗೆ ಒಬ್ಬರೇ ಹೆಂಡತಿ. ನನ್ನ ಹೆಂಡತಿ ಹೆಸರು ಜಯಮ್ಮ. ರತ್ನಮ್ಮ ನನ್ನ 2 ನೇ ಹೆಂಡತಿ. ಜಯಮ್ಮ ಮೃತಪಟ್ಟ ನಂತರ ರತ್ನಮ್ಮನನ್ನು ಮದುವೆ ಆಗಿದ್ದೇನೆ. ಜಯಮ್ಮ

ಮುಖಾಂತರ ಮಂಜುಳ ಹಾಗೂ ಶಿಲ್ಪ ಎಂಬ ಇಬ್ಬರು ಮಕ್ಕಳು. 2 ನೇ ಹೆಂಡತಿ ಮಕ್ಕಳು ನವೀನ್ ಕುಮಾರ್ ಹಾಗೂ ಸಾತ್ವಿಕ್ ಎಂಬ ಇಬ್ಬರು ಮಕ್ಕಳು.

20. ನನ್ನ ತಾತನಿಗೆ ಯಾವೆಲ್ಲಾ ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ನನ್ನ ತಾತ ಮೃತಪಟ್ಟ ನಂತರ ನನ್ನ ತಂದೆ ಹಾಗೂ ದೊಡ್ಡಪ್ಪಂದಿರು ಭಾಗ ಮಾಡಿಕೊಂಡಿದ್ದಾರ ಎಂದು ಗೊತ್ತಿಲ್ಲ. ದಾವಾ ಸ್ವತ್ತುಗಳು ನಾಗಣ್ಣ ಬಿನ್ ಕೆಂಚಯ್ಯರವರಿಗೆ ಸೇರಿದ ಸ್ವತ್ತು ಅಂದರೆ ಸರಿಯಲ್ಲ. ನಾಗಣ್ಣನವರ ಮಗಳು ಈರಮ್ಮ ಸಂಜೀವಯ್ಯನನ್ನು ಮದುವೆ ಆದ ನಂತರ ದಾವಾ ಸ್ವತ್ತನ್ನು ಈರಮ್ಮನಿಗೆ ಉಳಿಮೆ ಮಾಡಲು ಬಳುವಳಿಯಾಗಿ ಬಿಟ್ಟುಕೊಟ್ಟಿದ್ದಾರೆಂದರೆ ಸರಿಯಲ್ಲ. 1940 ನೇ ಇಸವಿಯಿಂದ ಸದರಿ ಈರಮ್ಮನವರು ದಾವಾ ಸ್ವತ್ತಿನಲ್ಲಿ ಉಳುಮೆ ಮಾಡಿಕೊಂಡು ಸ್ವಾಧೀನದಲ್ಲಿದ್ದರು ಅಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೂಲ ಖಾತೆದಾರರು ನಾಗಣ್ಣ ಬಿನ್ ಕೆಂಚಯ್ಯ ಅಂದರೆ ಸರಿಯಲ್ಲ. 1938-39 ನೇ ಸಾಲಿನಲ್ಲಿ ನಾಗಣ್ಣ ಕಂದಾಯ ಪಾವತಿಸದೇ ಇರುವುದರಿಂದ ಸರ್ಕಾರದವರು ಪಡಾ ಎಂದು ಮಾಡಿರುತ್ತಾರೆ ಅಂದರೆ ಸಾಕ್ಷಿ ಪಡಾ ಮಾಡಿರುತ್ತಾರೆಂದು ನುಡಿಯುತ್ತಾರೆ,

21. ನಾಗಣ್ಣ ಮೃತಪಟ್ಟ ನಂತರ ಅವರಿಗೆ ಈರಮ್ಮ ಬಿಟ್ಟು ಬೇರೆ ಹಕ್ಕುದಾರರು ಇಲ್ಲದೇ ಇರುವುದರಿಂದ ಈರಮ್ಮ ಅದಕ್ಕೆ ಹಕ್ಕುದಾರರಾಗುತ್ತಾರೆ ಅಂದರೆ ಸರಿಯಲ್ಲ. 1988-89 ನೇ ಸಾಲಿನಲ್ಲಿ ಸದರಿ ಈರಮ್ಮ ದಾವಾ 1 ನೇ ಸ್ವತ್ತಿಗೆ ಪಡಾ ರದ್ದತಿ ಮಾಡಿ ಹಾಗೂ ಕಂದಾಯ ಪಾವತಿಸುತ್ತೇನೆಂದು ಅರ್ಜಿ ಕೊಟ್ಟರು ಅಂದರೆ ಸರಿ. ಆ ಅರ್ಜಿ ಮೇಲೆ ಆರ್ ಆರ್ ಟಿ 6/1988-89 ರಂತೆ ಒಂದು ಪ್ರಕರಣ ದಾಖಲಿಸಿಕೊಳ್ಳುತ್ತಾರೆಂದರೆ ಸರಿ. ದಿ:26.03.1993 ರಂದು ಸದರಿ ಈರಮ್ಮ ಕೊಟ್ಟ ಅರ್ಜಿ ಆಧಾರದಲ್ಲಿ ಸ್ಥಳ ಪರಿಶೀಲನೆ ಮಾಡಿ ಪಡಾ ರದ್ದತಿ ಆದೇಶ ಆಗಿದೆ ಅಂದರೆ ಸಾಕ್ಷಿ ಆಗಿದೆ ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ದಾಖಲೆಗಳನ್ನು ಪರಿಶೀಲನೆ ಮಾಡಿದ್ದಾರೆಂದರೆ ಸರಿ. ರೂ. 890/- ಪಾವತಿಸಬೇಕೆಂದು ಆದ ಆದೇಶದಂತೆ ಈರಮ್ಮನವರು ಪಾವತಿಸುತ್ತಾರೆಂದರೆ ಸರಿ. ಎಂ ಆರ್ 27/1993-94 ರಂತೆ ಸದರಿ ನಾಗಣ್ಣನ ಹೆಸರಿಗೆ ಪಡಾ ರದ್ದತಿ ಆದೇಶದ ಪ್ರಕಾರ ಮ್ಯುಟೇಷನ್ ಆಗುತ್ತದೆ ಅಂದರೆ ಸರಿ. ಅಷ್ಟೊತ್ತಿಗೆ ನಾಗಣ್ಣ ಮೃತಪಟ್ಟಿರುತ್ತಾರೆಂದರೆ ಸರಿ. ಮೂಲ ಖಾತೆದಾರರ ಹೆಸರಿಗೆ ಆ ರೀತಿ ಖಾತಾ ಮಾಡುತ್ತಾರೆಂದರೆ ಸರಿ. ಎಂ ಆರ್ 32/1993-94 ರಂತೆ ಈರಮ್ಮನ ಹೆಸರಿಗೆ ನಂತರ ಖಾತೆ ಆಗಿರುತ್ತದೆ ಅಂದರೆ ಸರಿ. ನಂತರ ಕಂದಾಯ ಈರಮ್ಮ ಅವರೇ ಕಟ್ಟಿಕೊಂಡು ಬಂದಿರುತ್ತಾರೆಂದರೆ ಸರಿ.

22. ದಾವಾ 1 ನೇ ಸ್ವತ್ತಿನ ಪಶ್ಚಿಮಾರ್ಧ ಭಾಗದಲ್ಲಿ 2 ಎಕರೆಯನ್ನು ಶಿವಕುಮಾರ್ ಎಂಬುವರಿಗೆ ಮಾರಾಟ ಮಾಡಿ ಸ್ವಾಧೀನ ಬಿಟ್ಟುಕೊಡುತ್ತಾರೆ ಅಂದರೆ ಸರಿ. ಸದರಿ ಕ್ರಯಪತ್ರದ ದಿನಾಂಕ:26.05.1994 ರದ್ದು ಅಂದರೆ ಸಾಕ್ಷಿ 1994 ರದ್ದು ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರಕ್ಕೆ ಈರಮ್ಮ ಮತ್ತು ಮಕ್ಕಳು ಪಕ್ಷಗಾರರಾಗಿದ್ದಾರೆಂದರೆ ಸರಿ. ಎಂ ಆರ್ 8/94-95 ರಂತೆ ಖಾತೆ ಸದರಿ ಶಿವಕುಮಾರ್ ಹೆಸರಿಗೆ ಆಗುತ್ತದೆ ಅಂದರೆ ಸರಿ. ಅದರಲ್ಲಿ 1 ಎಕರೆಯನ್ನು ಪೆಟ್ರೋಲ್ ಬಂಕ್

ಗೋಸ್ಕರ ವ್ಯವಸಾಯೇತರ ಜಮೀನಾಗಿ ಅವರು ಪರಿವರ್ತಿಸಿಕೊಳ್ಳುತ್ತಾರೆಂದರೆ ಸರಿ. ಕಂದಾಯ ಅಧಿಕಾರಿಗಳು ಆ ಸಂದರ್ಭದಲ್ಲಿ ಸ್ಥಳ ಪರಿಶೀಲನೆಗೆ ಬಂದಾಗ ನಾನು ತಕರಾರು ಮಾಡಿಲ್ಲ ಅಂದರೆ ಸಾಕ್ಷಿನಾನು ತಕರಾರು ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

23. ದಾವಾ 1 ನೇ ಸ್ವತ್ತಿನ ಪೂವಾರ್ಧ ಸ್ವತ್ತನ್ನು ವಾದಿಗೆ ದಿನಾಂಕಃ18.06.1994 ರ ವಿಲ್ ಮೂಲಕ ಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಿನಾಂಕಃ02.07.1994 ರಂದು ಸದರಿ ವಿಲ್ ಮಾಗಡಿ ನೋಂದಣಿ ಕಚೇರಿಯಲ್ಲಿ ನೋಂದಣಿ ಕೂಡಾ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ದಿಃ31.07.1994 ರಲ್ಲ್ ಈರಮ್ಮ ಮೃತಪಟ್ಟಿದ್ದಾರೆ ಅಂದರೆ ಸರಿ. ಅವರು ಮೃತಪಟ್ಟ ನಂತರ ವಾದಿ ದಾವಾ ಸ್ವತ್ತಿಗೆ ವಾರಸುದಾರರಾಗುತ್ತಾರೆ ಅಂದರೆ ಸಾಕ್ಷಿ ವಿಲ್ ಪ್ರಕಾರ ಆಗುತ್ತಾರೆಂದು ನುಡಿಯುತ್ತಾರೆ. ವಾದಿ ಖಾತೆ ಮಾಡಿಕೊಡಲು ತಹಶೀಲ್ದಾರ್ ಗೆ ಅರ್ಜಿ ಕೊಡುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ನನ್ನ ತಾತ ನರಸಿಂಹೇಗೌಡರು ಅನುಭವದಲ್ಲಿದ್ದ ಕಾರಣ ನನಗೂ ಅದರಲ್ಲಿ ಸಂಬಂಧ ಇದೆ ಎಂದು ನುಡಿಯುತ್ತಾರೆ. ನನ್ನ ತಾತನಿಗೆ ದಾವಾ ಸ್ವತ್ತು ಮೂಲತಃ ಹೇಗೆ ಬಂತು ಎಂದು ನನಗೆ ಗೊತ್ತಿದೆ. ನರಸಿಂಹೇಗೌಡರಿಗೆ ದಾವಾ ಸ್ವತ್ತು ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲ. ಅವರಿಗೆ ಯಾವ ರೀತಿ ಬಂತು ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ. ದಾವಾ ಸ್ವತ್ತುಗಳು ನಮಗೆ ಸೇರಿದ್ದು ಎಂದು ತೋರಿಸಲು ಸಂಬಂಧಪಟ್ಟ ದಾಖಲೆಗಳು ಇದೆ.

24. 1938 ರ ಇಸವಿ ತನಕ ಕಂದಾಯ ಪಾವತಿಸಲು ನಮಗೆ ತೊಂದರೆ ಇರಲಿಲ್ಲ. ನನ್ನ ತಾತ ಯಾಕೆ ಕಂದಾಯ ಕಟ್ಟಿಲ್ಲ ಎಂದು ನನಗೆ ಗೊತ್ತಿಲ್ಲ. ಆಗ ನಾನು ಹುಟ್ಟಿರಲಿಲ್ಲ ಹಾಗಾಗಿ ನನಗೆ ಗೊತ್ತಿಲ್ಲ. 1975 ರಲ್ಲಿ ನನಗೆ ತಿಳುವಳಿಕೆ ಬಂದಿದ್ದರಿಂದ ಕೂಡಾ ನಾನು ದಾವಾ ಸ್ವತ್ತಿನ ಹಕ್ಕು ಸ್ವರೂಪ ಹಾಗೂ ಕಂದಾಯ ಪಾವತಿಸದೇ ಇರುವ ಬಗ್ಗೆ ನನ್ನ ತಂದೆ ಹಾಗೂ ಇತರರನ್ನು ಕೇಳಿರುವುದಿಲ್ಲ. 1988-89 ರಲ್ಲೂ ಕೂಡಾ ನಾನು ದಾವಾ ಸ್ವತ್ತಿನ ಹಕ್ಕು ಸ್ವರೂಪ ಹಾಗೂ ಕಂದಾಯ ಪಾವತಿಸದೇ ಇರುವ ಬಗ್ಗೆ ನನ್ನ ತಂದೆ ಹಾಗೂ ಇತರರನ್ನು ಕೇಳಿರುವುದಿಲ್ಲ. ದಾವಾ ಸ್ವತ್ತು ಬಿಟ್ಟು ನನ್ನ ಕುಟುಂಬಕ್ಕೆ ಸಂಬಂಧಪಟ್ಟಂತೆ ಬೇರೆ ಆಸ್ತಿಗಳು ಇತ್ತು. ಯಾವ ಆಸ್ತಿಗಳು ಹಾಗೂ ಅವುಗಳ ವಿವರಣೆ ಹೇಳಲು ಆಗುವುದಿಲ್ಲ. ನನ್ನ ತಂದೆ ಹಾಗೂ ದೊಡ್ಡಪ್ಪಂದಿರು ಅವರ ಜೀವಂತ ಕಾಲದಲ್ಲಿ ಯಾವುದೇ ಭಾಗ ಮಾಡಿಕೊಂಡಿಲ್ಲ. ಅವರುಗಳು ಮೃತಪಟ್ಟ ನಂತರ ನಾವುಗಳು ಕೂಡಾ ಯಾವುದೇ ವಿಭಾಗ ಮಾಡಿಕೊಂಡಿಲ್ಲ. ಮೇಲೆ ಹೇಳಿದಂತ ಬೇರೆ ಆಸ್ತಿಗಳು ಮಾರಾಟ ಆಗಿವೆ. ನಮ್ಮ ಕುಟುಂಬದ ಆಸ್ತಿಗಳನ್ನು ಪೂರ್ತಿ ಮಾರಾಟ ಮಾಡಿದ ನಂತರ ಈರಮ್ಮ ರವರಿಗೆ ಅವರ ತಂದೆ ದಾವಾ ಆಸ್ತಿಯನ್ನು ಬಳುವಳಿಯಾಗಿಕೊಟ್ಟರು ಅಂದರೆ ಸರಿಯಲ್ಲ.

25. ನನ್ನ ತಾತ ಜೀವಂತ ಇರುವಾಗಲೇ ನನ್ನ ತಂದೆ ಹಾಗೂ ದೊಡ್ಡಪ್ಪಂದಿರಿಗೆ ಕುಟುಂಬದ ಸ್ವತ್ತುಗಳಲ್ಲಿ ಭಾಗ ಹಂಚಿದ್ದಾರೆಂದರೆ ನನಗೆ ಗೊತ್ತಿಲ್ಲ. ಆ ರೀತಿ ಹಂಚಿರುವುದರಿಂದಲೇ ಅವರುಗಳು ಅವರ ಭಾಗದ ಸ್ವತ್ತುಗಳನ್ನು ಮಾರಾಟ ಮಾಡಿರುವುದು ಅಂದರೆ ಸಾಕ್ಷಿ ಮಾರಾಟ ಮಾಡಿದ್ದಾರೆಂದು

ನುಡಿಯುತ್ತಾರೆ. ಈರಮ್ಮ ಬದುಕಿರುವ ತನಕ ನಾವು ಪಡಾ ರದ್ದತಿ ಪಡಿಸಲು ಹಾಗೂ ಕಂದಾಯ ಪಾವತಿಸಲು ಯಾವುದೇ ಮುತುವರ್ಜಿ ತೋರಿಸಿಲ್ಲ ಅಂದರೆ ಸರಿ. ಈರಮ್ಮ ಬದುಕಿರುವ ತನಕ ಅವರೇ ಸ್ವಾಧೀನದಲ್ಲಿದ್ದರು ಅಂದರೆ ಸಾಕ್ಷಿ ನಾವು ಸ್ವಾಧೀನದಲ್ಲಿದ್ದೆವು ಎಂದು ನುಡಿಯುತ್ತಾರೆ. ಪಡಾ ರದ್ದತಿ ಮಾಡುವಾಗ ತಹಶೀಲ್ದಾರರು ಸ್ಥಳ ತನಿಖೆ ಮಾಡಿಸಿ ಹಾಗೂ ಕೂಲಂಕುಷವಾಗಿ ದಾಖಲೆಗಳನ್ನು ಪರಶೀಲಿಸಿ ಆದೇಶ ಮಾಡಿರುವುದು ಅಂದರೆ ಸರಿ. ಆ ರೀತಿ ಆದೇಶ ಆಗಿರುವ ವಿಚಾರ 1993 ರಲ್ಲೇ ನನಗೆ ಗೊತ್ತಾಯಿತು ಅಂದರೆ ಸರಿ. ನಾವು ಈರಮ್ಮರವರ ಹೆಸರಿಗೆ ಪಡಾ ರದ್ದತಿ ಆದೇಶ ಆಗಿರುವುದರ ವಿರುದ್ದ ಮೇಲ್ಮನವಿ ಸಲ್ಲಿಸಿದ್ದೇವೆ. ನಾಗಣ್ಣ ಹಾಗೂ ಈರಮ್ಮರ ಹೆಸರಿಗೆ ಮೇಲೆ ಹೇಳಿದಂತೆ ಮ್ಯುಟೇಷನ್ ಆಗಿರುವುದರ ವಿರುದ್ದ ರಾಮನಗರ ಎಸಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇವೆ. ಆ ರೀತಿ ಮೇಲ್ಮನವಿ ಸಲ್ಲಸಿರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ಸಾಕ್ಷಿ ಆ ಬಗ್ಗೆ ನಿಡಿ 14 ನ್ನು ತೋರಿಸುತ್ತಾರೆ. ನಿಡಿ 14 ಸದರಿ ಮೇಲ್ಕಂಡ ಮ್ಯುಟೇಷನ್ ಗಳನ್ನು ಪ್ರಶ್ನಿಸಿರುವ ಆದೇಶ ಅಲ್ಲ ಅಂದರೆ ಸರಿಯಲ್ಲ. ಆ ಮ್ಯುಟೇಷನ್ ನ್ನು ಪ್ರಶ್ನಿಸಿರುವ ಬಗ್ಗ ದಾಖಲೆಯನ್ನು ಇನ್ನು ಹಾಜರುಪಡಿಸುತ್ತೇನೆಂದು ಸಾಕ್ಷಿ ಸ್ವತಃ ಹೇಳುತ್ತಾರೆ.

26. ನನ್ನ ತಂದೆ ಹಾಗೂ ದೊಡ್ಡಪ್ಪಂದಿರು ಹಾಗೂ ನಮಗೆ ದಾವಾ ಸ್ವತ್ತು ಗಳು ಸಂಬಂಧ ಪಡದೇ ಇದ್ದುದರಿಂದ ಪಡಾ ರದ್ದತಿ ಅರ್ಜಿ ಸಲ್ಲಿಸಿಲ್ಲ ಅಂದರೆ ಸಾಕ್ಷಿ ನಾವು ಅರ್ಜಿ ಹಾಕಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಸ್ವತಃ 1988-89 ರ ಮುಂಚೆ ನಮಗೆ ಪಡಾ ರದ್ದತಿಗೆ ನೋಟೀಸು ಜಾರಿ ಮಾಡಿದ್ದಾರೆ ಎಂದು ಸ್ವತಃ ಹೇಳುತ್ತಾರೆ. ಆ ನೋಟೀಸಿಗೆ ತಕರಾರು ಸಲ್ಲಿಸಿದ್ದೀರ ಅಂದರೆ ಸಾಕ್ಷಿ ನಾವು ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ನಂತರ ಅವರುಗಳ ಹೆಸರಿಗೆ ಖಾತೆ ಆಗಿರುವುದನ್ನು ಕೂಡಾ ಪ್ರಶ್ನಿಸಿಲ್ಲ ಅಂದರೆ ಸಾಕ್ಷಿ ದಾಖಲೆ ಹಾಜರುಪಡಿಸುತ್ತೇನೆಂದು ನುಡಿಯುತ್ತಾರೆ. ಶಿವಕುಮಾರ್ ರವರಿಗೆ ಬರೆದುಕೊಟ್ಟ ಕ್ರಯಪತ್ರವನ್ನು ನಾವು ಎಲ್ಲೂ ಪ್ರಶ್ನಿಸಿಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**